
# ಪ್ರಾರ್ಥನೆ

## ಸ್ವಾಮಿ ಅಚಲಾನಂದ ಸರಸ್ವತಿ ವಿರಚಿತ

## 'ಶ್ರೀಶಾರದಾ ಸುಪ್ರಭಾತ' ದಿಂದ



ಮಾತಃ ಸಮಸ್ತ ಜಗತಾಂ ಪರಮಸ್ಯ ಪುಂಸಃ
ಶಕ್ತಿಸ್ವರೂಪಿಣಿ ಶಿವೇ ಕರುಣಾದ್ರಚಿತ್ತೇ ।
ಲೋಕಸ್ಯ ಶೋಕಶಮನಾಯ ಕೃತಾವತಾರೇ
ಶ್ರೀ ಶಾರದೇಽಸ್ತು ಶಿವದೇ ತವ ಸುಪ್ರಭಾತಮ್ ॥

ಪರಮಪುರುಷನ ಶಕ್ತಿಸ್ವರೂಪಿಣಿಯೇ, ಸರ್ವಮಂಗಳೆ, ಮರುಕದಿಂದ ಕರಗಿನ ಮನಸ್ಸುಳ್ಳವಳೆ, ಜಗದ ದುಃಖವನ್ನು ಹೋಗಲಾಡಿಸಲು ಇಳಿದು ಬಂದವಳೆ, ಮಂಗಳವನ್ನು ನೀಡುವವಳೆ, ಸರ್ವಲೋಕಮಾತೆಯೆ, ಶ್ರೀಶಾರದಾದೇವಿ, ನಿನಗೆ ಸುಪ್ರಭಾತ.

ಬಾಲ್ಯೇ ಭವಸ್ಯ ತಮಸಃ ಪರಿಹಾರಯಿತ್ರೇ
ಲೀಲಾಮನುಷ್ಯವಪುಷೇಽಥ ಗದಾಧರಾಯ ।
ದತ್ತೇ ತದರ್ಪಿತಧಿಯಾಪ್ತ ಸಮಸ್ತ ವಿದ್ಯೇ
ಶ್ರೀಶಾರದೇಽಸ್ತು ಶಿವದೇ ತವ ಸುಪ್ರಭಾತಮ್॥

ಜಗತ್ತಿನ ಅಜ್ಞಾನವನ್ನು ಕಳೆಯಲು ಲೀಲೆಗಾಗಿ ನರದೇಹವನ್ನು ಧರಿಸಿ ಬಂದ ಗದಾಧರನಿಗೆ ಬಾಲ್ಯದಲ್ಲಿಯೇ ವಿವಾಹಿತಳಾಗಿ, ಮನಸ್ಸನ್ನು ಪೂರ್ಣವಾಗಿ ಆತನಿಗೊಪ್ಪಿಸಿ, ಎಲ್ಲ ವಿದ್ಯೆಗಳನ್ನೂ ಪಡೆದುಕೊಂಡ, ಶುಭವನ್ನೇ ಮಾಡುವ ಶ್ರೀಶಾರದಾದೇವಿ, ನಿನಗೆ ಶುಭೋದಯವಾಗಲಿ.

ಬಾಲ್ಯಾತ್ ಪರೇ ವಯಸಿ ಭರ್ತರಿ ಸಂಪ್ರವತ್ತಾ-
ಮುನ್ಮತ್ತ ಇತ್ಯನುಚಿತಾಮವಧೂಯ ವಾರ್ತಾಮ್ ।
ತದ್ದರ್ಶನಕ್ರಮಿತದುರ್ಗಮದೂರಮಾರ್ಗೇ
ಶ್ರೀರಾಮಕೃಷ್ಣ ಪರಮೇಶ್ವರಿ ಸುಪ್ರಭಾತಮ್ ॥

ಯೌವನದಲ್ಲಿ, ಪತಿಯು ಹುಚ್ಚನೆಂದು ಜನರಾಡುತ್ತಿದ್ದ ಅನುಚಿತವಾದ ಮಾತನ್ನು ಅಲ್ಲಗಳೆದು, ಆತನ ದರ್ಶನಕ್ಕಾಗಿ ಕಷ್ಟಸಾಧ್ಯವೂ, ದೂರವೂ ಆದ ದಾರಿಯನ್ನು ನಡೆದವಳೇ, ಶ್ರೀರಾಮಕೃಷ್ಣದೇವನ ಪ್ರಿಯತಮಳೆ, ನಿನಗೆ ಸುಪ್ರಭಾತವಾಗಲಿ.

ಆವೃಣ್ವತೀ ಪರಮಿಕಾಂ ಪ್ರಕೃತಿಂ ಸ್ವಕೀಯಾಂ
ಸಂಸಾರಿಣೀವ ಬಹುದುಃಖಜಲೇ ಭವಾಬ್ಧೌ ।
ಸರ್ವಂ ಸಹೇ ಶ್ರಿತಜನೋದ್ಧರಣೈಕದೀಕ್ಷೇ
ಶ್ರೀರಾಮಕೃಷ್ಣದಯಿತೇ ತವ ಸುಪ್ರಭಾತಮ್ ॥

ಪರಾಶಕ್ತಿಯೆಂಬ ತನ್ನ ನಿಜವಾದ ರೂಪವನ್ನು ಮರೆಮಾಡಿ, ದುಃಖಮಯವಾದ ಭವಸಾಗರದಲ್ಲಿ ಸಂಸಾರಿಣಿಯಂತೆ ಎಲ್ಲ ಕಷ್ಟವನ್ನೂ ಸಹಿಸಿಕೊಂಡು, ಆಶ್ರಿತರ ಉದ್ಧಾರಕ್ಕಾಗಿ ಬದ್ಧ ಕಂಕಣಳಾದ ಶ್ರೀರಾಮಕೃಷ್ಣಪ್ರಿಯೇ, ನಿನಗೆ ಶುಭೋದಯವಾಗಲಿ.

ಶ್ರೀರಾಮಕೃಷ್ಣದಯಿತೇ ತದಧೀನಸತ್ವೇ
ತದ್ಭಕ್ತವೃಂದಪರಿಪಾಲಿನಿ ಮುಕ್ತಿದಾತ್ರಿ ।
ತದ್ಭಾವರಕ್ತಹೃದಯೇ ತದಭಿನ್ನತತ್ತ್ವೇ
ಮಾತಸ್ಸಮಸ್ತಜಗತಾಂ ತವ ಸುಪ್ರಭಾತಮ್ ॥

ಶ್ರೀರಾಮಕೃಷ್ಣರಿಗೆ ಪ್ರಿಯಳಾದವಳೇ, ಅವರಿಗೆ ಅಧೀನವಾದ ಬಾಳ್ವೆ ನಡೆಸಿದವಳೇ, ಅವರ ಭಕ್ತಸಮೂಹವನ್ನು ಕಾಪಾಡುವವಳೇ, ಮುಕ್ತಿಯನ್ನು ನೀಡುವವಳೇ, ಅವರ ಭಾವದಲ್ಲಿ ಅನುರಕ್ತನಾದ ಅಂತಃಕರಣವುಳ್ಳವಳೇ, ತತ್ತ್ವತಃ ಅವರಿಂದ ಬೇರೆಯಲ್ಲದ ಜಗಜ್ಜನನಿಯೇ, ನಿನಗೆ ಶುಭೋದಯವಾಗಲಿ.

## ಮನಸ್ಸು

ಎಲ್ಲವೂ ಮನಸ್ಸನ್ನು ಅವಲಂಬಿಸಿದೆ. ಮನಸ್ಸು ಶುದ್ಧವಾಗದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಒಂದು ಮಾತಿದೆ – 'ಸಾಧಕನಾದವನು ಗುರು-ಕೃಷ್ಣ-ವೈಷ್ಣವ -ಈ ಮೂವರ ಕೃಪೆಯನ್ನೂ ಪಡೆದಿರಬಹುದು; ಆದರೆ 'ಒಂದರ' ಕೃಪೆ ಆಗದೆ ಇದ್ದರೆ ದುಃಖಕ್ಕೆ ಗುರಿಯಾಗುತ್ತಾನೆ.' ಆ 'ಒಂದೇ' ಮನಸ್ಸು. ಸಾಧಕನ ಮನಸ್ಸು ಅವನಿಗೆ ಕೃಪೆ ಮಾಡಬೇಕು.

ಚಿಂತಿಸಬೇಡ. ಕಣ್ಣು – ಕಿವಿಗಳ ಹಾಗೆ ಮನಸ್ಸಿನ ಸ್ವಭಾವವೂ ಚಂಚಲ. ಪ್ರತಿದಿನ ಸಾಧನೆ ಮಾಡು. ಭಗವಂತನ ನಾಮ ಇಂದ್ರಿಯಗಳಿಗಿಂತಲೂ ಬಲಶಾಲಿ. ಯಾವಾಗಲೂ ಶ್ರೀರಾಮಕೃಷ್ಣರನ್ನು ಸ್ಮರಿಸು. ಅವರು ನಿನ್ನೊಂದಿಗೆ ಇದ್ದಾರೆ. ನಿನ್ನ ಲೋಪದೋಷಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡ.

ಸಣ್ಣಪುಟ್ಟ ವಿಷಯಗಳನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಹೀಗೆ ಮಾಡುತ್ತ ಹೋದರೆ ನೀನು ಭಗವಂತನನ್ನೇ ಮರೆತುಬಿಡುವಂತಾಗುತ್ತದೆ. ನೋಡು, ಭಗವಂತನನ್ನು ಸ್ಮರಿಸಿಕೊಳ್ಳುತ್ತ ನಿನಗೆ ಯಾವುದು ಸರಿ ಕಾಣುತ್ತದೆಯೋ ಅದನ್ನು ಮಾಡಿಕೊಂಡು ಹೋಗುತ್ತಿರು. ಬೇರೆಯವರು ಆಡುವ ಮಾತಿಗೆಲ್ಲ ಕಿವಿಗೊಡುತ್ತ ಕುಳಿತಿರಬೇಡ.

ಕೆಳಮುಖವಾಗಿ ಹರಿಯುವುದು ನೀರಿನ ಸ್ವಭಾವ. ಆದರೆ ಸೂರ್ಯನ ಕಿರಣಗಳು ಅದನ್ನು ಆಕಾಶದ ಎತ್ತರಕ್ಕೆ ಎತ್ತುತ್ತವೆ. ಹಾಗೆಯೇ ಪ್ರಾಪಂಚಿಕ ಭೋಗವಸ್ತುಗಳ ಕಡೆಗೆ ಹೋಗುವುದೇ ಮನಸ್ಸಿನ ಸ್ವಭಾವ. ಆದರೆ ಭಗವಂತನ ಕೃಪೆ ಅದನ್ನು ಉನ್ನತ ಹಂತಕ್ಕೆ ಎತ್ತುತ್ತದೆ.

ಅತಿಯಾದ ಪ್ರಶ್ನೆಗಳನ್ನು ತುಂಬಿಕೊಂಡು ಮನಸ್ಸಿನಲ್ಲಿ ಗೊಂದಲ ಉಂಟುಮಾಡಿಕೊಳ್ಳಬೇಡ. ಯಾವುದಾದರೂ ಒಂದನ್ನು ಆಚರಣೆಗೆ ತರುವುದಕ್ಕೇ ಕಷ್ಟವಾಗಿರುವಾಗ, ಮನಸ್ಸಿನಲ್ಲಿ ಹಲವಾರು ವಿಚಾರಗಳನ್ನು ತುಂಬಿಕೊಂಡು, ಏಕೆ ತಾನೇ ಗಲಿಬಿಲಿ ಮಾಡಿಕೊಳ್ಳಬೇಕು?

– ಶ್ರೀಮಾತೆ ಶಾರದಾದೇವಿ

# You are not mobile, if you are not KBL Mobile

**KBL Mobile**




## Safe. Simple. Speedy.

### Features of KBL Mobile Banking

- Quick and easy registration
- Instant activation
- User Friendly
- Send or receive funds anytime, anywhere.
- Bill payments

*Register now for "Lifestyle changing Banking"*

Visit your branch for more details or call 1800 425 1444 or email: info@ktkbank.com




# FREE SMS

## to know your transactions!!!

Get instant details of transactions with available balance in account

**Your convenience is our concern!!!**

* Conditions apply

**Karnataka Bank Ltd.**

Your Family Bank. Across India.

Regd. & Head Office: Mangalore - 575 002

E-mail: info@ktkbank.com Visit us at: www.karnatakabank.com

**ಸಂಪಾದಕೀಯ**

ಚೆನ್ನೈ ನಗರದಲ್ಲಿ ಸ್ವಾಮೀಜಿ ೯ ದಿನಗಳು ಉಳಿದುಕೊಂಡಿದ್ದ **'ಕ್ಯಾಸಲ್ ಕರ್ನನ್'** ಎಂಬ ಬಂಗಲೆ. ಇದನ್ನು ಈಗ **'ವಿವೇಕಾನಂದ ಇಲ್ಲಮ್'** ಎಂದು ಕರೆಯುತ್ತಾರೆ.




## ಭಾರತಭಾಗ್ಯವಿಧಾತನ

# ಚೆನ್ನೈ ರಣಕಹಳೆ

೧೮೯೭, ಫೆಬ್ರವರಿ ೬ನೆಯ ದಿನಾಂಕದಂದು ಸ್ವಾಮೀಜಿಯವರನ್ನು ಕರೆದುಕೊಂಡು ಬಂದ ರೈಲು ಎಗ್‌ಮೋರ್ ರೈಲ್ವೆ ನಿಲ್ದಾಣವನ್ನು ತಲುಪಿತು. ಅದ್ಭುತ ಸ್ವಾಗತದ ನಡುವೆ ಸ್ವಾಮೀಜಿಯವರನ್ನು ಕ್ಯಾಸಲ್ ಕರ್ನನ್ ಎಂಬ ಬಂಗಲೆಗೆ ಕರೆತರಲಾಯಿತು. ಇಲ್ಲಿ ಸ್ವಾಮೀಜಿ ಒಂಬತ್ತು ದಿನಗಳ ಕಾಲ ಇದ್ದರು. ಚೆನ್ನೈನಲ್ಲಿ ನವರಾತ್ರಿಯ ಸಂಭ್ರಮ ಏರ್ಪಟ್ಟಿತು!

ಈ ಅವಧಿಯಲ್ಲಿ ಸ್ವಾಮೀಜಿ ತಮ್ಮ ಜೀವಿತಕಾಲದ ಆರು ಪ್ರಮುಖ ಭಾಷಣಗಳನ್ನು ಮಾಡಿದರು. ಅವುಗಳಲ್ಲಿ ತಮ್ಮ ಬಾಳಿನ ಉದ್ದೇಶವನ್ನು ಬಿಚ್ಚಿಟ್ಟರು; ರಾಷ್ಟ್ರದ ಬಗ್ಗೆ ತಮ್ಮೆಲ್ಲ ಉದಾತ್ತ ಚಿಂತನೆಗಳನ್ನು ಹೊರಗೆಡಹಿದರು; ಭವ್ಯ ಭವಿಷ್ಯ ಭಾರತದ ಕನಸನ್ನು ಕಂಡರು! ಸ್ವಾಮಿ ವಿವೇಕಾನಂದರು, ಈ ಭಾಷಣಗಳಲ್ಲಿ ಒಬ್ಬ ರಾಷ್ಟ್ರನಿರ್ಮಾಪಕನ ಸ್ಥಾನವನ್ನು ಅಲಂಕರಿಸುತ್ತಾರೆ; ಭಾರತದ ಉಜ್ವಲ ಭವಿಷ್ಯವನ್ನು ಜಗತ್ತಿಗೆ ಸಾರುವ ಮಹಾನ್ ಪ್ರವಾದಿಯ ಪಾತ್ರವನ್ನು ವಹಿಸುತ್ತಾರೆ. ಸ್ವಾಮೀಜಿ ತಮ್ಮ ಚೆನ್ನೈ ಭಾಷಣಗಳಲ್ಲಿ ಹೇಳಿದ್ದಾದರೂ ಏನು? ಆ ವಿಷಯಗಳ ಸಂಕ್ಷಿಪ್ತ ಸಾರಾಂಶವನ್ನು ನಾವೀಗ ತಿಳಿದುಕೊಳ್ಳೋಣ.

**ಆಮೂಲಾಗ್ರ ಸಮಾಜ ಸುಧಾರಣೆ:** ಆಗಿನ ಕಾಲದ ಸಮಾಜ ಸುಧಾರಕರಿಗೆ ಸ್ವಾಮೀಜಿ ಕಿವಿಮಾತೊಂದನ್ನು ಹೇಳುತ್ತಾರೆ: "ಸುಧಾರಕರಿಗೆ, ನಾನು ಒಬ್ಬ ದೊಡ್ಡ ಸುಧಾರಕ ಎಂದು ಹೇಳುತ್ತೇನೆ. ಅವರು ಮಾರ್ಗವನ್ನು ಸುಧಾರಿಸಲು ಯತ್ನಿಸುವರು... ನನಗೆ ಆಮೂಲಾಗ್ರ ಸುಧಾರಣೆ ಬೇಕು. ಅವರದು ಧ್ವಂಸ ಮಾರ್ಗ. ನನ್ನದು ನಿರ್ಮಾಣ ಮಾರ್ಗ. ನನಗೆ ಸುಧಾರಣೆಯಲ್ಲಿ ನಂಬಿಕೆಯಿಲ್ಲ. ನನಗೆ ಬೆಳವಣಿಗೆಯಲ್ಲಿ ನಂಬಿಕೆಯುಂಟು." ಭಾರತೀಯರಾದ ನಮ್ಮಲ್ಲಿ ದೋಷಗಳಿವೆ,

ಖಂಡಿತ. ಎಲ್ಲರೂ ದೋಷವನ್ನು ತೋರಿಸಬಹುದು. ಆದರೆ, ಅದರಿಂದ ಪಾರಾಗಲು ಮಾರ್ಗವನ್ನು ಯಾರು ತೋರಬಲ್ಲರೋ, ಅವರೇ ಮಾನವತೆಯ ನಿಜವಾದ ಸ್ನೇಹಿತರು. ನಿಜವಾದ ಸಮಾಜ ಸುಧಾರಣೆ ಆರಂಭವಾಗುವುದು ಶಿಕ್ಷಣದಿಂದ. ಅದಕ್ಕಾಗಿ ಮೊದಲು ಜನರಲ್ಲಿ ಶಿಕ್ಷಣವನ್ನು ಹರಡಬೇಕು. ನಾವು ಸಮಸ್ಯೆಯ ಮೂಲಕ್ಕೆ ಹೋಗಬೇಕು. "ಇದನ್ನೇ ನಾನು ಆಮೂಲಾಗ್ರ ಸುಧಾರಣೆ ಎನ್ನುತ್ತೇನೆ" ಎನ್ನುತ್ತಾರೆ ಸ್ವಾಮೀಜಿ. ನಮ್ಮ ಪ್ರಾಚೀನ ಆಚಾರ್ಯರೂ ಮಹಾನ್ ಸಮಾಜಸುಧಾರಕರೇ ಆಗಿದ್ದರು. ಭರತಖಂಡಕ್ಕೆ ಎಂದೂ ಸುಧಾರಕರ ಬರ ಇರಲಿಲ್ಲ. ಶಂಕರ, ರಾಮಾನುಜ, ನಾನಕ್, ಚೈತನ್ಯ, ಕಬೀರ ಮುಂತಾದವರೆಲ್ಲರೂ ಸಮಾಜ ಸುಧಾರಕರೇ. ಶ್ರೀಶಂಕರಾಚಾರ್ಯರು ಜನಸಾಮಾನ್ಯರಿಗೆ ವೇದಾಂತ ಸಿದ್ಧಾಂತದ ಪರಿಚಯವನ್ನು ಮಾಡಿಕೊಡಲು ಯತ್ನಿಸಿದರು. ರಾಮಾನುಜಾಚಾರ್ಯರು ಅಂತ್ಯಜರಿಗಾಗಿ ಮರುಗಿದರು; ಚಂಡಾಲರನ್ನು ಕೂಡ ತಮ್ಮ ಪಂಗಡಕ್ಕೆ ಸೇರಿಸಿಕೊಳ್ಳಲು ತಮ್ಮ ಜೀವಮಾನವೆಲ್ಲ ಪ್ರಯತ್ನಪಟ್ಟರು. ಇವರಿಬ್ಬರಿಗೂ ಸಮಾಜದ ದೋಷಗಳ ಬಗ್ಗೆ ಅರಿವಿತ್ತು. ಆದರೆ ಅವರು ಕ್ರಮೇಣ ಜನರನ್ನು ಉತ್ತಮ ಆದರ್ಶದ ಕಡೆಗೆ ಕರೆದುಕೊಂಡು ಹೋಗುವ ಮಾರ್ಗವನ್ನು ಅನುಸರಿಸಿದರೇ ಹೊರತು, ತೆಗಳಿಕೆಯ ಮಾರ್ಗವನ್ನಲ್ಲ. ಆಧುನಿಕ ಸಮಾಜ ಸುಧಾರಕರ ಬಾಯಿಯಿಂದ ಹೊರಬರುವ ಶಾಪದ ಸುರಿಮಳೆ ಅವರ ಬಾಯಿಯಿಂದ ಬರಲಿಲ್ಲ. ಅವರು ಯಾರನ್ನೂ ನಿಂದಿಸ ಲಿಲ್ಲ; ಎಲ್ಲರನ್ನೂ ಆಶೀರ್ವದಿಸಿದರು; ನಮ್ಮ ಜನಾಂಗ ಯಾವಾ ಗಲೂ ಮುಂದುವರೆಯುತ್ತಿರಬೇಕೆಂದು ಹೇಳಿದರು.

**ಸ್ವಾಮೀಜಿಯವರ ಯೋಜನೆ:** ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಘೋಷಿಸುತ್ತಾರೆ: **"ಪುರಾತನ ಮಹಾತ್ಮರ ಆಲೋಚನೆಗಳನ್ನು ಅನುಸರಿಸುವುದೇ ನನ್ನ ಯೋಜನೆ"** ಎಂದು. ಭಾರತದಲ್ಲಿ ಯಾವುದೇ ರೀತಿಯ ಪ್ರಗತಿಯನ್ನು ಧಾರ್ಮಿಕತೆಯ ಆಧಾರದ ಮೇಲೆಯೇ ಮಾಡಬೇಕು. ಇದರಂತೆ ಸಮಾಜಸುಧಾರಣೆಯನ್ನು ಕೂಡ ಅದು ಹೇಗೆ ಆಧ್ಯಾತ್ಮಿಕ ಸಂಪತ್ತನ್ನು ಹೆಚ್ಚಿಸಬಹುದು ಎಂಬುದನ್ನು ಲಕ್ಷ್ಯವಾಗಿಟ್ಟುಕೊಂಡೇ ಮಾಡಬೇಕು. ರಾಜಕೀಯಕ್ಕೂ ಅದೇ ಲಕ್ಷ್ಯವಿರಬೇಕು. ಅದಕ್ಕೆಂದೇ ಸ್ವಾಮೀಜಿ ಹೀಗೆ ಕರೆ ಕೊಡುತ್ತಾರೆ: "ರಾಜಕೀಯ ಮತ್ತು ಸಾಮಾಜಿಕ ವಿಷಯ ಗಳಿಂದ ಭರತಖಂಡವನ್ನು ತುಂಬುವುದಕ್ಕಿಂತ ಮುಂಚೆ ಆಧ್ಯಾತ್ಮಿಕ ಭಾವನೆಯ ಮಳೆಗರೆಯಿರಿ... (ಅದಕ್ಕಾಗಿ) ನಮ್ಮ ಉಪನಿಷತ್-ಶಾಸ್ತ್ರ-ಪುರಾಣಗಳಲ್ಲಿರುವ ಅದ್ಭುತ ಸತ್ಯಗಳು ಪ್ರಚಾರವಾಗಬೇಕು. ಮಠಗಳಿಂದ, ಕಾನನಗಳಿಂದ, ತಮಗೇ ಅವು ಮೀಸಲಾಗಿವೆ ಎಂದು ಭಾವಿಸಿರುವ ಕೆಲವು ಜನರಿಂದ ಹೊರಗೆ ತಂದು ಎಲ್ಲರಿಗೂ ಪ್ರಚಾರ ಮಾಡಬೇಕು. ಈ ಭಾವನೆ ಬೆಂಕಿಯಂತೆ ಉತ್ತರದಿಂದ ದಕ್ಷಿಣಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಸಿಂಧುವಿನಿಂದ ಬ್ರಹ್ಮಪುತ್ರದವರೆಗೆ ಹರಿಯಬೇಕು." ಸ್ವಾಮೀಜಿ, ಈ ದಾನಶೀಲ ದೇಶದಲ್ಲಿ ಜ್ಞಾನದಾನವನ್ನು ನಾವು ಕೈಗೊಳ್ಳಬೇಕು ಎನ್ನುವರು. ಅದು ಪ್ರಪಂಚದಲ್ಲೆಲ್ಲಾ ಹರಿಯಬೇಕು ಎಂದು ಆಶಿಸುವರು. ಹಾಗೆಂದೇ ಹೀಗೆ ಹೇಳುತ್ತಾರೆ: "ನಿಮ್ಮ ಧರ್ಮದ ಮಹಾ ಸತ್ಯವನ್ನು ಜಗತ್ತಿಗೆ ಬೋಧಿಸಿ; ಪ್ರಪಂಚ ಅದಕ್ಕಾಗಿ ಕಾಯುತ್ತಿದೆ."

**ಜನ, ಜನ, ಎಲ್ಲಿ ಜನ?:** ಮೇಲಿನ ಮಹಾನ್ ಕಾರ್ಯಕ್ಕಾಗಿ ಬೇಕಾಗಿರುವುದು ಜನ. ಸ್ವಾಮೀಜಿಯವರ ಪ್ರಕಾರ ಉಳಿದುವೆಲ್ಲ ಅನಂತರ ಬರುವುವು. ಯುವಕರು ಬೇಕಾಗಿದ್ದಾರೆ ಎನ್ನುತ್ತಾರೆ, ಸ್ವಾಮೀಜಿ. ಎಂತಹ ಯುವಕರು? ವೀರ್ಯವಾನ್, ತೇಜಸ್ವಿ, ಶ್ರದ್ಧಾಸಂಪನ್ನ, ಕಡೆಯತನಕ ನಿಷ್ಕಪಟಿಗಳಾದ ಯುವಕರು ಬೇಕಾಗಿದ್ದಾರೆ! ಇಂತಹ ನೂರು ಜನರು ಸಿಕ್ಕಿದರೆ, ಪ್ರಪಂಚವನ್ನೇ ಬದಲಾಯಿಸಬಹುದು ಎಂದೂ ಸ್ವಾಮೀಜಿ ಆಶಿಸುತ್ತಾರೆ. ಆದರೆ ನಮ್ಮ ಜನಕ್ಕೆ ಅಂತಹ ಆತ್ಮವಿಶ್ವಾಸವಿಲ್ಲ, ಶಕ್ತಿಯಿಲ್ಲ ಎಂದು ವ್ಯಥೆ ಪಡುತ್ತಾರೆ. "ಪ್ರತಿದಿನ ನಿಮ್ಮಿಂದ ಏನೂ ಆಗುವುದಿಲ್ಲ, ನೀವು ನಿಷ್ಪ್ರಯೋಜಕರು ಎಂದು ಬೋಧಿಸಲಾಗುತ್ತಿದೆ. ಅದರಂತೆಯೇ ನೀವೂ ಆಗುತ್ತಿರುವಿರಿ. ನಮಗೆ ಇಂದು ಬೇಕಾಗಿರುವುದು ಶಕ್ತಿ. ಅದಕ್ಕಾಗಿಯೇ ಆತ್ಮವಿಶ್ವಾಸವಿರಲಿ" ಎಂದು ಕಳಕಳಿಯಿಂದ ಹೇಳುತ್ತಾರೆ.

**ದೇಶಭಕ್ತಿ:** ದೇಶಭಕ್ತಿಯ ಬಗ್ಗೆ ತಮ್ಮದೇ ಆದ ಒಂದು ಆದರ್ಶ ವಿದೆ ಎಂದು ಸ್ವಾಮೀಜಿ ಹೇಳುವರು. ಮಹತ್ಕಾರ್ಯವನ್ನು ಸಾಧಿಸಲು ಮೊದಲು **ಹೃದಯವಂತಿಕೆ** ಅವಶ್ಯ. ಅದಕ್ಕಾಗಿಯೇ ಅವರು ತಮ್ಮ ದೇಶಬಾಂಧವರಿಗೆ ಹೀಗೆ ಕರೆಕೊಡುತ್ತಾರೆ: "ಭಾವಿ ದೇಶಭಕ್ತರೇ, ಸಮಾಜಸುಧಾರಕರೇ, ಮೊದಲು ದೇಶಭಕ್ತಿಯನ್ನು ನಿಮ್ಮ ಹೃದಯದಲ್ಲಿ ಅನುಭವಿಸಿ... ದೇಶಭಕ್ತರಾಗುವುದಕ್ಕೆ ಇದೇ ಮೊದಲ ಹೆಜ್ಜೆ." ದೇಶಭಕ್ತರಾಗುವ ಎರಡನೆಯ ಹೆಜ್ಜೆಯೆಂದರೆ, ದೇಶ ಎದುರಿಸುತ್ತಿರುವ ಸಮಸ್ಯೆಗೆ ಯಾವುದಾದರೊಂದು **ಪರಿಹಾರ ಮಾರ್ಗವನ್ನು ಕಂಡುಹಿಡಿಯುವುದು**; ನಮ್ಮ ದೇಶದ ಜನರನ್ನು ಸುಮ್ಮನೆ ದೂರುತ್ತಿರದೆ, ಇಂದಿನ ಮೃತಸ್ಥಿತಿಯಿಂದ ಅವರನ್ನು ಮೇಲೆತ್ತಿ, ಅವರ ದುಃಖವನ್ನು ಶಮನಗೊಳಿಸುವ ಸಹಾನುಭೂತಿಯ ನುಡಿಗಳನ್ನು ಆಡುವುದು. ದೇಶಭಕ್ತರಾಗಲು ಮೂರನೆಯ ಆವಶ್ಯಕತೆಯೆಂದರೆ, ಪರ್ವತಗಳಂತಹ ಆತಂಕ ಗಳನ್ನು ದಾಟಬಲ್ಲ **ಇಚ್ಛಾಶಕ್ತಿ**. ದೇಶಭಕ್ತನಾದವನು ತನ್ನ ದೇಶವನ್ನು ಯಾವ ಕಾರಣಕ್ಕೂ ನಿಂದಿಸಬಾರದು. ಅದಕ್ಕೆ ಬದಲಾಗಿ, ಕೋಟ್ಯಂತರ ಜೀವಿಗಳನ್ನು ಭವಸಾಗರದಿಂದ ಪಾರು ಮಾಡಿರುವ ನಮ್ಮ ರಾಷ್ಟ್ರನೌಕೆಯಲ್ಲಿ, ನಮ್ಮ ಅಜಾಗರೂಕತೆ ಯಿಂದಲೇ ಕಾಣಿಸಿಕೊಂಡಿರುವ ರಂಧ್ರವನ್ನು, ನಮ್ಮ ಹೃದಯವನ್ನಾದರೂ ಕೊಟ್ಟು ಮುಚ್ಚುವ ಕೆಲಸವನ್ನು ನಾವು ಮಾಡಬೇಕು. ಆ ಕಾರ್ಯಕ್ಕಾಗಿ ನಮ್ಮ ಪ್ರಾಣವನ್ನೇ ಅರ್ಪಿಸಲು ತಯಾರಾಗಿರಬೇಕು. ಇದೇ ಒಬ್ಬ ನೈಜ ದೇಶಭಕ್ತನ ಲಕ್ಷಣ.

**ಉಪನಿಷತ್ತುಗಳು – ನಮ್ಮ ರಾಷ್ಟ್ರೀಯ ಧ್ಯೇಯದ ಆಕರಗಳು :** ಭಾರತದಲ್ಲಿ ಪ್ರತಿಯೊಬ್ಬನಿಗೂ ಉಪನಿಷತ್ತುಗಳೇ ಪ್ರಮಾಣ ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. ಅವರ ಪ್ರಕಾರ ಉಪನಿಷತ್ತುಗಳೇ ನಮ್ಮ ಶಾಸ್ತ್ರಗ್ರಂಥಗಳು. ಉಪನಿಷತ್ತುಗಳಲ್ಲಿ